# ತೆಪ್ಪದ ಮೇಲಿಂದ ಜಲಪಾತ ದರ್ಶನ

ಜೀವನಕ್ಕೆ ಬೇಕಾದ ಉತ್ತಮ ಸಂದೇಶ, ಅನುಭವ ನೀಡಲು ಪ್ರವಾಸ ಸಹಕಾರಿ. ಹೊಗೇನಕಲ್‌ಗೆ 22 ವರ್ಷ ಹಿಂದೆ ಹೋದ ಪ್ರವಾಸದ ಸಿಹಿ ಅನುಭವ ಎಂದಿಗೂ ಮರೆಯಲಾಗದ್ದು!

■ ಶಾಲಿನಿ ನಾಯಕ್ ಬೆಂಗಳೂರು

ಸುಮಾರು ಇಪ್ಪತ್ತೆರಡು ವರ್ಷಗಳ ಹಿಂದೆ ಮದುವೆಯಾದ ನಂತರ ನಾನು ಮೊದಲ ಸಲ ಪ್ರವಾಸಕ್ಕೆ ಹೊರಟಿದ್ದೆ. ನಾನು, ನನ್ನ ಪತಿ, ಮೂರು ವರ್ಷದ ಮಗ ಮತ್ತು ಅತ್ತೆಯವರೊಡನೆ ಒಂದು ವಾರದ ಪ್ರವಾಸ ಅದಾಗಿತ್ತು. ಹೊಗೇನಕಲ್ ನಾವು ನೋಡುವ ಸ್ಥಳಗಳಲ್ಲಿ ಒಂದಾಗಿತ್ತು. ಪ್ರವಾಸದ ಐದನೆಯ ದಿನ ಬೆಳಗ್ಗೆ ನಮ್ಮನ್ನು ತುಂಬಿಸಿಕೊಂಡ ಬಸ್ಸು ತಮಿಳುನಾಡಿನ ಧರ್ಮಪುರಿಯಿಂದ ಸುಮಾರು ನಲವತ್ತು ಕಿ.ಮೀ. ದೂರವಿರುವ ಹೊಗೇನಕಲ್ಲಿಗೆ ತೆರಳಿತು. ಅಲ್ಲಿ ಸುಂದರವಾದ ಜಲಪಾತವಿದೆಯೆಂದಷ್ಟೇ ನಮ್ಮ ಗೈಡ್ ಹೇಳಿದ್ದ.



ಹೊಗೇನಕಲ್ಲಿನಲ್ಲಿ ಕಾವೇರಿ ನದಿ ಎರಡು ಕವಲಾಗಿ ಒಂದೆಡೆ ಶಾಂತವಾಗಿ ಹರಿದರೆ ಇನ್ನೊಂದು ಕಡೆ ಕಪ್ಪು ಕಲ್ಲು ಬಂಡೆಗಳ ಕೊರಕಲಿನಲ್ಲಿ ಜಲಪಾತವಾಗಿ ಭೋರ್ಗರೆಯುತ್ತದೆ. ಈ ನದಿ ಕರ್ನಾಟಕ ಮತ್ತು ತಮಿಳುನಾಡಿನ ಗಡಿರೇಖೆಯಂತಿದೆ. ಹೊಗೇನಕಲ್ಲಿನಲ್ಲಿ ಬಸ್ಸಿಳಿದ ನಮ್ಮನ್ನು ಗೈಡ್ ಹತ್ತು ಜನರ ಗುಂಪುಗಳನ್ನಾಗಿ ವಿಂಗಡಿಸಿ ಶಾಂತವಾಗಿ ಹರಿಯುವ ನೀರ ಮೇಲಿನ ತೆಪ್ಪದಲ್ಲಿ ಕೂಡಿಸಿದಾಗ ಏನೊಂದೂ ಅರ್ಥವಾಗದೆ ಅಚ್ಚರಿಯೂ ಸ್ವಲ್ಪ ಭಯವೂ ಆಯಿತು. ನಾನು ತೆಪ್ಪವನ್ನು ನೋಡಿದ್ದು ಮತ್ತು ಕುಳಿತದ್ದು ಅದೇ ಮೊದಲು. ಇನ್ನೊಂದು ದಡದಲ್ಲಿ ನಮ್ಮನ್ನು ಇಳಿಸಿದ ತೆಪ್ಪ ನಡೆಸುವವನು ತೆಪ್ಪವನ್ನು ಹೆಗಲಿಗೇರಿಸಿ ತನ್ನನ್ನು ಹಿಂಬಾಲಿಸುವಂತೆ ಹೇಳಿದ. ನಯವಾದ ಕಲ್ಲ ಕೊರಕಲಿನ ಮಧ್ಯೆ ತೂಕದ ಹೆಜ್ಜೆ ಇಡುತ್ತ ನಾವು ಅವನನ್ನು ಹಿಂಬಾಲಿಸಿದೆವು. ಜಲಪಾತ ಎಲ್ಲಿದೆ, ಎಷ್ಟು ದೂರ ನಡೆಯಬೇಕು ಎನ್ನುವ ಯಾವ ಮಾಹಿತಿಯೂ ಇಲ್ಲದೆ ನಾವು ಮೌನವಾಗಿ ಅವನನ್ನು ಅನುಸರಿಸಿದೆವು. ಬೇಸಗೆಯ ದಿನಗಳು ಬೇರೆ, ಕಲ್ಲ ಹಾದಿಯಲ್ಲಿ ಅದೆಂತಹ ಜಲಪಾತವಿರಬಹುದು, ಇದ್ದರೂ ಎಷ್ಟು ನೀರಿರಬಹುದು ಎನ್ನುವ ಲೆಕ್ಕಾಚಾರದಲ್ಲೇ ನಾವು ಅಸಡ್ಡೆಯಿಂದ ಹೆಜ್ಜೆ ಹಾಕುತ್ತಿದ್ದೆವು. ಒಂದು ಕಡೆ ಬಂಡೆಗಳ ಕಡಿದಾದ ಇಳಿಜಾರಿನಲ್ಲಿ ನಮ್ಮನ್ನು ಇಳಿಸಿದಾಗ ಎದುರುಗಡೆ ತುಂಬಿ ಹರಿಯುವ ಕಾವೇರಿಯ ದರ್ಶನವಾಯಿತು. ದೂರದಲ್ಲೆಲ್ಲೋ ಜಲಪಾತದ ಸದ್ದು ಕೇಳಿಸುತಿತ್ತು. ಆತ ನಮ್ಮನ್ನು ಮತ್ತೆ ತೆಪ್ಪದಲ್ಲಿ ಕೂಡಿಸಿದ.

ನದಿಯ ಎರಡೂ ಭಾಗದಲ್ಲಿ ಎತ್ತರದ ಕಪ್ಪು ಕಲ್ಲು ಬಂಡೆಗಳು ಗೋಡೆಗಳನ್ನು ನಿರ್ಮಿಸಿದ್ದವು. ನಡುವೆ ಹರಿಯುವ ಕಾವೇರಿಯಲ್ಲಿ ನಮ್ಮ ಪಯಣ. ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ತೆಪ್ಪದಲ್ಲಿ ನಮ್ಮ ಸಂಸಾರದ ಹೊರತಾಗಿ ಮೂರು ಯುವ ಜೋಡಿಗಳು ಇದ್ದವು. ಆಗ ತಾನೆ ಮದುವೆಯಾದವರು ತಮ್ಮ ಆನಂದವನ್ನು ಹತ್ತಿಕ್ಕಲಾರದೆ ಒಬ್ಬರ ಮೇಲೊಬ್ಬರು ನೀರೆರಚುತ್ತ, ಆಟವಾಡುತ್ತ ಸಾಗಿದ್ದರು. ಸುಮಾರು ದೂರ ಸಾಗಿದಾಗ ತೆಪ್ಪ ನಡೆಸುವಾತ ರೋಜಾ ಸಿನೆಮಾದ 'ಛೋಟಿಸಿ ದಿಲ್... ಛೋಟಿಸಿ ಆಶಾ....' ಹಾಡಿನ ಚಿತ್ರೀಕರಣ ಇಲ್ಲೇ ನಡೆದದ್ದು, ಆ ತೆಪ್ಪವನ್ನು ತಾನೇ ನಡೆಸಿದ್ದು ಎಂದು ಹೆಮ್ಮೆಯಿಂದ ಹೇಳಿದಾಗ ನಮ್ಮ ದೃಷ್ಟಿಯಲ್ಲಿ ಅವನು ಕೆಲಕಾಲ ಹೀರೋ ಆಗಿಬಿಟ್ಟಿದ್ದ. ಮಾತನ್ನು ಮುಂದುವರಿಸಿದ ಅವನು ವೀರಪ್ಪನ್ ಅದೇ ಕಾಣ್ತದೆಯಲ್ಲ ಸಾರ್... ಮಲೆಮಹದೇಶ್ವರ ಬೆಟ್ಟ... ಅಲ್ಲೇ ಇರೋದು ಅಂದಾಗ ಅವನ ಕ್ರೌರ್ಯದ ನೆನಪಾಗಿ ಭಯವೂ ಆಯಿತು. ಮುಂದಕ್ಕೆ ಹೋಗುತ್ತಿದ್ದಂತೆ ಜಲಪಾತದ ಮೊರೆತ ಜೋರಾಗುತ್ತ ಹೋಗಿ ಒಮ್ಮೆಲೇ ಎಲ್ಲರ ಬಾಯಿಂದ ಅರೆ.....ಆಹಾ...ಎಂಬ ಉದ್ಗಾರ ಬಂತು. ಕಲ್ಲು ಬಂಡೆಗಳ ನಡುವಿನಿಂದ ಎರಡು ಮೂರು ಕಡೆ ಧಾರೆಗಳಾಗಿ ಬೆಳ್ಳನೆಯ ಬೆಡಗಿ ರಭಸವಾಗಿ ಧುಮ್ಮಿಕ್ಕುವ ರುದ್ರರಮಣೀಯ ದೃಶ್ಯ ನಮ್ಮ ಕಣ್ಣ ಮುಂದಿತ್ತು. ನಯನ ಮನೋಹರವಾದ ಆ ದೃಶ್ಯ ವರ್ಣಿಸಲು ಸಾಧ್ಯವಿಲ್ಲ. ಬೇಡ ಬೇಡವೆಂದರೂ ತೆಪ್ಪದವ ಎತ್ತರದ ಜಲಪಾತದ ಬುಡಕ್ಕೆ ಸಾಗತೊಡಗಿದ. ಮೈಮೇಲೆಲ್ಲ ನೀರ ತುಂತುರು ಅಭಿಷೇಕವಾಗುತ್ತಿತ್ತು. ನಮ್ಮ ಜೊತೆ ಮಗು ಇರುವ ಕಾರಣವೊಡ್ಡಿ ಮುಂದೆ ಹೋಗುವುದು ಬೇಡವೆಂದೆವು. ದೂರದಿಂದ ನೋಡಲು ಎಷ್ಟು ಸುಂದರವೋ ಹತ್ತಿರ ಸರಿಯುತ್ತಿದ್ದಂತೆ ಮೈ ಜುಂ ಎಂದಿತು.

ಹಿಂತಿರುಗುವ ನದಿಯ ಹಾದಿಯಲ್ಲಿ ಒಂದಷ್ಟು ದೂರ ಸಾಗಿದ ತೆಪ್ಪಗಳು ಮರಳ ದಂಡೆಯೊಂದಕ್ಕೆ ಆತುನಿಂತವು. ಅಲ್ಲಿ ಮಾಂಸಾಹಾರಿಗಳಿಗೆ ಬಿಸಿ ಬಿಸಿ ಫಿಶ್‌ಫ್ರೈ ಮಾಡಿಕೊಡುತ್ತಿದ್ದರು. ಐಸ್‌ಕ್ರೀಂ ಅಂಗಡಿಗಳು, ಚಹಾದ ಅಂಗಡಿಗಳು ನಮ್ಮಂತಹವರಿಂದ ಗಜಿಬಿಜಿ ಸದ್ದು ಮಾಡುತ್ತಿದ್ದವು. ಕೆಲವರು ಪೈಲ್ವಾನರಿಂದ ದೇಹಪೂರ್ತಿ ಮಿರುಗುವಂತೆ ಎಣ್ಣೆ ಹಚ್ಚಿ ಮಾಲೀಶು ಮಾಡಿಸಿಕೊಂಡು ಬಿಸಿಲಿಗೆ ಮೈ ಕಾಯಿಸುತ್ತಿದ್ದರು. ನಾವು ಅಲ್ಲಿಯೇ ಇದ್ದ ಸ್ವಲ್ಪ ಎತ್ತರದ ಕೋಡುಗಲ್ಲಿನ ಮೇಲೆ ಕುಳಿತು ಫೋಟೊ ಕ್ಲಿಕ್ಕಿಸಿಕೊಂಡೆವು. ಕಾವೇರಿ ಕಣಿವೆಯ ಜಲಪಯಣದಿಂದ ಹಿಂತಿರುಗುವಾಗ ಆ ಸುಂದರ ತಾಣದ ಅಗಲಿಕೆಯ ನೋವು ಮನತುಂಬಿತ್ತು. ತೆಪ್ಪದಲ್ಲಿ ಮೊದಲ ಬಾರಿ ಕುಳಿತು ನೋಡಿದ ಹೊಗೇನಕಲ್ ಜಲಪಾತ ಎಂದೂ ಮರೆಯಲಾಗದ ಸಿಹಿನೆನಪು. ■